**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಶಿಕಾರಿಪುರ.**

**ಸಿಸಿ ನಂ.** 412/2025

| | | |
|---|---|---|
| ಸಾಕ್ಷಿದಾರರ ಹೆಸರು | ನೇತ್ರಾವತಿ | ಪಿಡಬ್ಲ್ಯು– 2 |
| ಗಂಡನ ಹೆಸರು | ನಾಗರಾಜ್ | ಸಿಡಬ್ಲ್ಯು– 2 |
| ವಯಸ್ಸು | 35 | |
| ಉದ್ಯೋಗ | ಕೂಲಿ | ಪ್ರತಿಜ್ಞೆ ಮೇರೆಗೆ ದಿನಾಂಕಃ |
| ವಾಸ | ಹಳೇ ಧೂಪದಹಳ್ಳಿ | **21.04.2026.** |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸಸಅ ರವರಿಂದಃ–**

1. ನನಗೆ ಆರೋಪಿಗಳ ಪರಿಚಯ ಇದೆ, ಅವರು ನಮ್ಮ ಸಂಬಂಧಿಕರು. ಚಾಸಾ – 1 ನನ್ನ ತಂಗಿ. ಚಾಸಾ – 3 ನನ್ನ ಗಂಡ. ದಿಃ 30.04.2025 ರಂದು ನನ್ನ ತಂಗಿ ಅಂದರೆ ಚಾಸಾ – 1 ರವರು ತನ್ನ ಗಂಡ ಮೃತಪಟ್ಟಿದ್ದ ಕಾರಣ ನಮ್ಮ ಮನೆಗೆ 3 ತಿಂಗಳು ಇದ್ದು ಹೋಗಲು ಬಂದಿದ್ದರು. ದಿಃ 01.05.2025 ರಂದು ಬೆಳಿಗ್ಗೆ 7.30 ಕ್ಕೆ ನಾನು, ನನ್ನ ಗಂಡ, ನನ್ನ ತಂಗಿ ಮತ್ತು ನನ್ನ ಮಗಳು ಮನೆಯಲ್ಲಿದ್ದಾಗ ಗಂಗಮ್ಮ, ಮಂಜಮ್ಮ, ನೀಲಮ್ಮ, ನವೀನ್, ಸಚಿನ್ ಎಲ್ಲರೂ ಸೇರಿ ನಮ್ಮ ಮನೆಗೆ ಬಂದು ನನ್ನ ತಂಗಿಗೆ ಹೊಡೆದಿರುತ್ತಾರೆ. ಆ ದಿನ ಅವರು ನನ್ನ ತಂಗಿ ಮತ್ತು ನನ್ನ ಗಂಡನಿಗೆ ಅನೈತಿಕ ಸಂಬಂಧ ಇದೆ ಎಂದು ಹೇಳಿ ನನ್ನ ತಂಗಿಯನ್ನು ಹೊಡೆದಿರುತ್ತಾರೆ. ಆಗ ನಾವು ಜಗಳ ಬಿಡಿಸಿ ನನ್ನ ತಂಗಿಯನ್ನು ದೂರು ಕೊಡಲು ಠಾಣೆಗೆ ಕರೆದುಕೊಂಡು ಬಂದಿದ್ದು, ಅವರು ಹೇಳಿದ ಮೇರೆಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಪೋಲೀಸರು ಈ ಬಗ್ಗೆ ನನ್ನ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

(ಸಾಕ್ಷಿಯನ್ನು  ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ.ಸ. ಅಭಿಯೋಜಕರಿಂದಃ**

2. ಆ ದಿನ ಆರೋಪಿಗಳು ನನ್ನ ತಂಗಿಗೆ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಆ ದಿನ ಕರಿಬಸಮ್ಮ, ನೀಲಮ್ಮ, ಗಂಗಮ್ಮ ಎಲ್ಲರೂ ಸೇರಿ ಚಾಸಾ – 1 ರವರ ಕೂದಲು ಹಾಗೂ ಬಟ್ಟೆ ಹಿಡಿದು ಎಳೆದಾಡಿ, ಕೈ ಯಿಂದ ಚಾಸಾ – 1 ರವರ ಮೈಕೈಗೆ ಹೊಡೆದು ಹಲ್ಲೆ ಮಾಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ  ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಯಾವುದೇ ಸಕಾರಣವಿಲ್ಲದ ಕಾರಣ ವಕೀಲರ ಕೋರಿಕೆ ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಲ್ಲಿ ಬೆರಳಚ್ಚು ಮಾಡಲಾಗಿದೆ.**

**ಓ ಹೇ ಕೇ ಸ ಇದೆ.**

**ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶಿಕಾರಿಪುರ.**